ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 3, July-August 2024, Pp. 1-5
Bi-Monthly, Peer-Reviewed, Open Access, Indexed Journal

I S S N: 2583-3510

SIRDF JOURNALS
editor@srujani.in
www.srujani.in

ಎಚ್.ಎಸ್.ರಾಘವೇಂದ್ರರಾವ್ ವಿಮರ್ಶಾ ದೃಷ್ಟಿಯಲ್ಲಿ ದೇವನೂರ ಮಹಾದೇವರ ಕಾದಂಬರಿಗಳ ತಾತ್ವಿಕತೆ

ವಸಂತ ಕುಮಾರ ಟಿ

ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ.

Abstract:

ಕನ್ನಡ ಕಥಾ ಸಾಹಿತ್ಯಕ್ಕೆ ಹೊಸ ದಿಕ್ಕು ದೆಸೆಗಳನ್ನು ತೋರಿಸಿದ ದೇವನೂರ ಮಹಾದೇವರು ನವ್ಯೋತ್ತರ ಸಾಹಿತ್ಯ ಸಂದರ್ಭದ ಅಗ್ರಗಣ್ಯ ಲೇಖಕರು. ದಲಿತ ಸಾಹಿತ್ಯದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ ಒಬ್ಬ ಶಿಷ್ಟ ಕಾದಂಬರಿಕಾರ ಎನಿಸಿಕೊಂಡಿರುವ ಅವರು ಒಬ್ಬ ಶಿಷ್ಟ ಬರಹಗಾರರಾಗಿ ಕನ್ನಡ ಸಾಹಿತ್ಯದ ಸಾರಸ್ವತ ಲೋಕದಲ್ಲಿ ಪ್ರಸಿದ್ಧರಾಗಿದ್ದಾರೆ. ಎಚ್.ಎಸ್.ಆರ್. ಹೇಳುವಂತೆ ದೇವನೂರ ಮಹಾದೇವರವರು ದಲಿತರೆನ್ನುವುದೋ, ಆ ಸಮುದಾಯಗಳ ಜೀವನಕ್ರಮವನ್ನು ಮುನ್ನಲೆಗೆ ತಂದರೆನ್ನುವುದೋ ಅವರು ಹೆಸರುವಾಸಿಯಾಗಿರುವುದಕ್ಕೆ ಕಾರಣವಾಗಬೇಕಿಲ್ಲ, ಪ್ರತಿಯೊಬ್ಬ ಲೇಖಕನೂ ತನಗೆ ಪರಿಚಿತವಾದ ಜೀವನ ಪರಿಸರವನ್ನು ಪರಿಚಿತವಾದ ಭಾಷೆಯನ್ನು ಬರವಣಿಗೆಗೆಂದು ಆರಿಸಿಕೊಳ್ಳುತ್ತಾನೆ. ಅದು ಸಹಜ ಆದರಿಂದ ಯಾರು ದೊಡ್ಡ ಲೇಖಕರಾಗುವುದಿಲ್ಲ ಇಲ್ಲಿ ಈ ಮಾತಿನ ಪ್ರಸ್ತಾಪ ಬರುವುದು ಅವರ ಬದುಕು ಮತ್ತು ಬರಹ ಹಾಗೂ ಐತಿಹಾಸಿಕ ಮಹತ್ವವನ್ನು ಚರ್ಚಿಸುವಾಗ ದೇವನೂರರ ನಿಜವಾದ ಮಹತ್ವವಿರುದು ಸೃಜನಶೀಲತೆಯ ಸ್ವರೂಪದಲ್ಲಿ.

Keywords: *ಕನ್ನಡ ಕಾದಂಬರಿ, ಬಂಡಾಯ ಸಾಹಿತ್ಯ, ದೇವನೂರ ಮಹಾದೇವ.*

ಪೀಠಿಕೆ

ಕನ್ನಡ ಸಾಹಿತ್ಯದಲ್ಲಿ ದೇವನೂರ ಮಹಾದೇವರವರು 'ಒಡಲಾಳ' ಮತ್ತು 'ಕುಸುಮಬಾಲೆ' ಎಂಬ ಎರಡು ಕಾದಂಬರಿಯನ್ನು ಬರೆದು ಕನ್ನಡ ಸಾಹಿತ್ಯದಲ್ಲಿ ಅನನ್ಯ ಸ್ಥಾನವನ್ನು ಪಡೆದುಕೊಂಡರು. ದೇವನೂರ ಅವರಿಗೆ ಕುವೆಂಪು ಮತ್ತು ಅನಂತಮೂರ್ತಿಯವರ ಬರಹಗಳು ದೇವನೂರರ ಸಾಹಿತ್ಯ ಆಸಕ್ತಿಯನ್ನು ಹೆಚ್ಚುಗೊಳಿಸಿತು, ಆ ವೇಳೆಗಾಗಲೇ ಕುವೆಂಪುರವರ 'ಮಲೆಗಳಲ್ಲಿ ಮದುಮಗಳು' ಪ್ರಕಟಗೊಂಡಿತು. ದೇವನೂರರ ಸೃಜನಶೀಲತೆಯು ಎರಡು ದಿಕ್ಕಿನಲ್ಲಿ ಹರಿಯುತ್ತಿತ್ತು. ಸಾಹಿತ್ಯ ಕುರಿತು ನವ್ಯ ಸಾಹಿತಿಗಳ ನಿಲುವು ಒಂದು ಕಡೆಯಾದರೆ ಆ ಚೌಕಟ್ಟಿನಲ್ಲಿ ಬರಲು ಒಪ್ಪದೆ ಇರುವ ಅನುಭವ ಲೋಕ ಮತ್ತೊಂದು ಕಡೆ. ದೇವನೂರರು ಅನುಭವ ಸಾಹಿತ್ಯ ಲೋಕವೇ ಮುಖ್ಯ ಎಂದು ನಂಬಿದರು. ಆ ವೇಳೆಗೆ ಪೂರ್ಣಚಂದ್ರ ತೇಜಸ್ವಿಯವರ 'ಅಬಚೂರಿನ ಪೋಸ್ಟ್ ಆಫೀಸ್' ಕೃತಿಯಲ್ಲಿನ ಬಂಡಾಯ ದೇವನೂರರ ಮೇಲೆ ಅಗಾದ ಪರಿಣಾಮ ಬೀರಿತು. ತೇಜಸ್ವಿ ಅವರಿಗೆ ನೇರವಾಗಿ ತಿಳಿಯದ ದಲಿತಲೋಕದ ಅನುಭವ ಮಹಾದೇವರಿಗೆ ತಿಳಿದಿತ್ತು.

Please cite this article as: ವಸಂತ ಕುಮಾರ ಟಿ. (2024). ಎಚ್.ಎಸ್.ರಾಘವೇಂದ್ರರಾವ್ ವಿಮರ್ಶಾ ದೃಷ್ಟಿಯಲ್ಲಿ ದೇವನೂರ ಮಹಾದೇವರ ಕಾದಂಬರಿಗಳ ತಾತ್ವಿಕತೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 3(3), 1–5

ಕುವೆಂಪುರ ಗುತ್ತಿ–ತಿಮ್ಮಿಯರಾಗಲಿ, ಕಾರಂತರ ಚೋಮನಾಗಲಿ ಇವು ಯಾವೂ ಅವರ ಮೇಲೆ ಪರಿಣಾಮ ಬೀರಲಿಲ್ಲ.

ದಲಿತ ಲೋಕದ ಬಗ್ಗೆ ಮಹಾದೇವರು ತಾವು ಕಂಡ ನೋವುಗಳನ್ನು ಕಥನ ರೂಪದಲ್ಲಿ ಬರೆಯುವ ಒತ್ತಿಗೆ ದಲಿತ ಸಮುದಾಯದಲ್ಲಿ ಅಕ್ಷರ ಕಲಿತವರಿದ್ದರು. ಕೆ.ವಿ.ನಾರಾಯಣರವರು ಬಹಳ ಹಿಂದೆ ಒಂದು ಪ್ರಶ್ನೆ ಮಾಡಿದರು, ಮಹಾದೇವರು ದಲಿತರಿಗಾಗಿಯೇ ಕಥನ ಸಾಹಿತ್ಯಕ್ಕೆ ಕೈಹಾಕಿದರೂ ಅಥವಾ ಓದುಗರಿಗೆಂದು ಬರೆದರೋ, ಇವರಲ್ಲಿ ಅವರ ಬರವಣಿಗೆಯೇ ಉತ್ತರಿಸುತ್ತದೆ. ಎಚ್.ಎಸ್.ಆರ್. ಅವಲೋಕಿಸಿದಂತೆ, ಮಹಾದೇವರು ಮಾಸ್ತಿಯವರ ಹಾಗೆಯೇ ತೀರ ಚಿಕ್ಕ ವಯಸ್ಸಿನಲ್ಲಿಯೇ 'ಮಾಗುವಿಕೆ'ಯ ಫಲವಾಗಿ ಸಂಯಮ ಹಾಗೂ ತಿಳವಳಿಕೆಗಳನ್ನು ಪಡೆದರು. "ಮಹಾದೇವರು ಇನ್ನೊಂದು ಅಂಶವನ್ನು ಬಲವಾಗಿ ನಂಬಿದರು, ನಿರೂಪಣ ನಿಲುವುಗಳು ಕೃತಿಯ ಮೂಲಕ ಚಿಮ್ಮಬೇಕೇ ಹೊರತು ಅವನ ಮಾತುಗಳಿಂದ ಅಲ್ಲ".[1] ಮಹಾದೇವರ ಸಂವೇದನಾಶೀಲತೆ ಬೇರೆನೇ ಆಗಿತ್ತು. ಇಲ್ಲಿ ಕೋಪವೂ ಅಲ್ಲ ದುಃಖವೂ ಅಲ್ಲ ಬದಲಾಗಿ ಅದು ಎಲ್ಲವನ್ನೂ ಒಳಗೊಳ್ಳಬಲ್ಲ ಪ್ರೀತಿ. ಈ ಮಾತಿಗೆ ನಿದರ್ಶನವಾಗಿ ಯಶವಂತ ಚಿತ್ತಾಲರ ಮಾತು "ತಾನು ಹಿಡಿದಿದ್ದ ಅನುಭವ ಅದರ ಹುಟ್ಟಿಗೆ ಕಾರಣವಾದ ಸಾಮಾಜಿಕ ಸಂದರ್ಭದಲ್ಲಿ ನಿಜವಾಗುವಾಗಲೇ ಅದರ ಮಾನವೀಯ ಆಯಾಮಗಳನ್ನು ಸ್ಪಷ್ಟವಾಗಿ ಕಲಾತ್ಮಕವಾಗಿ ಅವು ನೇರವಾಗಿ ಮುಟ್ಟುವಂತೆ ತೆರೆದು ತೋರಿಸಿ ಆ ಸಂದರ್ಭವನ್ನೇ ಹೊಸಬೆಳಕಿನಲ್ಲಿ ನೋಡುವಂತೆ ಮಾಡುವುದರಲ್ಲಿ ಪ್ರತಿಯೊಂದು ಕಥೆಯು ಅಸಾಧಾರಣ ಯಶಸ್ಸು ಗಳಿಸಿದೆ."[2]

ಒಬ್ಬ ಲೇಖಕ ತನ್ನ ಅನುಭವವನ್ನು ತಾನು ಪಡೆದ ಸಾಮಾಜಿಕ ವಾತಾವರಣದಲ್ಲಿ ಅವುಗಳನ್ನು ಕಲಾತ್ಮಕವಾಗಿ ಜನಮಾನಸದಲ್ಲಿ ತೊರೆದು ತೋರಿಸುವ ಕೆಲಸದಲ್ಲಿ ಆತ ಪ್ರಮಾಣಿಕನಾಗುತ್ತಾನೆ. ಎಚ್.ಎಸ್.ಆರ್. ಹೇಳುವಂತೆ ಮಹಾದೇವರ ಒಡಲಾಳ ಕಾದಂಬರಿಯು ಒಂದು ಅದ್ಭುತವಾದ ಬರೆವಣಿಗೆಯನ್ನು ಒಳಗೊಂಡಿದ್ದು, ಇವು ಯಾವುದರ ಅನುಕರಣೆಯ ಮಾದರಿಯನ್ನು ಪಡೆದಿರುವುದಿಲ್ಲ. ಅದರ ಮೂಲ ಹಸಿವು. ಅದರಲ್ಲಿ ದೈಹಿಕವಾದ ಹಸಿವು, ಶಿಕ್ಷಣದ ಹಸಿವು, ಕಲಾತ್ಮಕವಾದ ಹಸಿವು, ಅಭಿವ್ಯಕ್ತಿಯ ಹಸಿವು ಅನ್ಯಾಯದಿಂದ ಬಿಡುಗಡೆ ಪಡೆಯುವ ತವಕ ಹೀಗೆ ಹಸಿವಿನ ನಾಗಲೋಟದಲ್ಲಿ ಕಾದಂಬರಿಯು ಒಳಗೊಂಡಿದೆ. 'ಒಡಲಾಳ' ಕೇವಲ ಹಳ್ಳಿಯ ಕಥೆಯಲ್ಲಿ ಇದು ಕುಟುಂಬ ಹಾಗೂ ಸಮುದಾಯವನ್ನು ಚಿತ್ರಿಸುವ ಬಗೆಯನ್ನು ಸಂಪೂರ್ಣವಾಗಿ ಕಟ್ಟಿಕೊಟ್ಟಿದೆ.

ಒಬ್ಬ ವ್ಯಕ್ತಿಯ ಅಸಹಾಯಕತೆ ಹೇಗಿರುತ್ತದೆ ಎಂದರೆ, ಇಲ್ಲಿ ಸಾಕಮ್ಮ ಹುಂಜವನ್ನು ಕಳೆದುಕೊಂಡ ಪ್ರಸಂಗ ಮತ್ತು ಕಡಲೆಕಾಯಿ ಮೂಟೆಯನ್ನು ಖಾಲಿಮಾಡುವ ಪ್ರಸಂಗ ಮತ್ತು ಶಿವು ಜೊತೆಗೆ ಅವಳು ನಡೆಸುವ ಸಂಭಾಷಣೆಯಲ್ಲಿ ಅವಳ ಘನತೆ ಮತ್ತು ಸೃಜನಶೀಲತೆ ಗೊತ್ತಾಗುವುದು. ಯಮನ ಜೊತೆ ತಾನು ನಡೆಯುವೆನೆಂದು ಅವಳು ಹೇಳುವ ಮಾತುಕತೆಯು ಬಡವರ ಬಾಳಿಗೆ ಹತಾಶೆ ಮತ್ತು ಆಶಾವಾದಿಗಳು ಹಿಡಿದ ಕನ್ನಡಿಯಾಗಿದೆ. ಇನ್ನೊಂದು ಕಡೆ ಪುಟ್ಟ ಗೌರಿಯು ಗೋಡೆಯ ಮೇಲೆ ಮತ್ತು ಶಿವು ಸ್ಲೇಟಿನ ಮೇಲೆ ಬರೆಯುವ ಚಿತ್ರಗಳು ಕಲೆಯ ಸೃಷ್ಟಿಗೆ ಅವಕಾಶ ಇಲ್ಲದೆ ವಂಚಿತವಾಗಿ ನರಳುವುದನ್ನು ತೋರಿಸುತ್ತದೆ. ಎಚ್.ಎಸ್.ಆರ್ ರವರು ಮಹಾದೇವರ ಕಾದಂಬರಿಯಲ್ಲಿ ಜನಾಂಗದ ಪರಿಕಲ್ಪನೆಯಲ್ಲಿ ಹೇಗೆ ವಿಶೇಷತೆ ಇದೆ ಎಂಬುದನ್ನು ಇಲ್ಲಿ ಹೇಳಿದ್ದಾರೆ. ಜನಾಂಗ ನಿರ್ದಿಷ್ಟ ಮಾನದಂಡಗಳ ಮಾತು ತಿರುಗು ಮುರುಗಾದ ಜಾತಿವಾದ ಆಗಬಾರದು. ವಿಮರ್ಶೆಯಲ್ಲಿ ವಿಶಿಷ್ಟ ಅನುಭವಲೋಕಗಳು ಗಣನೆಗೆ ಬರುವುದೇ ಇಲ್ಲವೆಂದಲ್ಲ ಗಣನೆಗೆ ಬರುವುದು ವಿಶೇಷ

ಮಾನದಂಡಗಳ ರೂಪದಲ್ಲಿ ಅಲ್ಲಿ ಬದಲಾಗಿ ಮೂಲದ್ರವ್ಯಗಳ ಜ್ಞಾನದಲ್ಲಿ ಎನ್ನಬಹುದು, ನಿರ್ದಿಷ್ಟ ಕೃತಿಯೊಂದು ರೂಪಗೊಳ್ಳುವುದು ಸನ್ನಿವೇಶ, ಆಶಯ, ಸೈದ್ಧಾಂತಿಕ ಹಾಗೂ ಸಾಮಾಜಿಕ ನೆಲೆಗಳನ್ನು ಮೂಲದ್ರವ್ಯವೆಂದು ಕರೆಯಬಹುದು.

ಎಚ್.ಎಸ್.ಆರ್ ರವರ ದೃಷ್ಟಿಕೋನದಲ್ಲಿ ಕಾದಂಬರಿಯ ತೌಲನಿಕತೆ ನೋಡುವುದಾರೆ 'ಒಡಲಾಳ' ಪ್ರಕಟಗೊಂಡ ಐದು ವರ್ಷಗಳ ನಂತರ 'ಕುಸುಮಬಾಲೆ' ಹೊರಬಂದಿತು. ಒಡಲಾಳಕ್ಕಿಂತ ಭಿನ್ನವಾದ ಸ್ವರೂಪವನ್ನು ಹೊಂದಿ, ಕೇವಲ ಇಪ್ಪತ್ತೆಂಟು ಪುಟಗಳ ಈ ಬರವಣಿಗೆಯು ಕಾದಂಬರಿಯ ಬಗ್ಗೆ ನಮಗಿದ್ದ ಕಲ್ಪನೆಯನ್ನೇ ತಲೆಕೆಳಗು ಮಾಡಿತು. ಕನ್ನಡ ಲೇಖಕರು ಮತ್ತು ಓದುಗರ ನಡುವೆ ಈ ಕಾದಂಬರಿಯ ಬಗ್ಗೆ ದ್ರುವೀಕರಣವಾಯಿತು. ಇದು ಅರ್ಥವಾಗುವುದಿಲ್ಲ ಇದನ್ನು ಕನ್ನಡಕ್ಕೆ ಅನುವಾದಿಸಬೇಕು ಎಂಬ ತೀರ್ಮಾನದವರೆಗೆ ವಿಮರ್ಶೆಗಳ ವರ್ಣಪಟಲ ಹರಡಿತ್ತು. ಲಂಕೇಶ್, ಚಂದ್ರಶೇಖರ ಪಾಟೀಲರು ಪ್ರಮಾಣಿಕವಾಗಿಯೇ ಇದನ್ನು ನಿರಾಕರಿಸಿದರು. ಬೇರೆ ಲೇಖಕರು ಇದನ್ನು ಸ್ವಾಗತಿಸಿದರು. ಈ ವಿವಾದ ಕುರಿತು ಮಹಾದೇವರಿಗೆ ಯಶವಂತ ಚಿತ್ತಾಲರು ಬರೆದ ಪತ್ರ–"ಇನ್ನೊಂದು ಸಂತೋಷ ಕೊಟ್ಟ ಸಂಗತಿ ಪುಸ್ತಕ ರೂಪದಲ್ಲಿ ಓದಿದಾಗ ಭಾಷೆ ತೊಡಕಾಗದೆ ತನ್ನಲ್ಲಿ ಕಾವ್ಯಶಕ್ತಿಯನ್ನು ಪ್ರಕಟಿಸಿತು ಎನ್ನುವುದು".[3] ಈ ನುಡಿಗಳಿಂದ ಒಂದು ಬರವಣಿಗೆಯನ್ನು ಹೇಗೆ ಸ್ವೀಕರಿಸಿ ಅನಂದಿಸಬೇಕು ಎಂಬುದನ್ನು ಇಲ್ಲಿ ವ್ಯಕ್ತಪಡಿಸಲಾಗಿದೆ. ದೇವನೂರ ಮಹಾದೇವರ ಎರಡು ಕಾದಂಬರಿ 'ಒಡಲಾಳ' ಹಾಗೂ 'ಕುಸುಮಬಾಲೆ' ಇಲ್ಲಿ ಕಾದಂಬರಿಕಾರನ ಪ್ರಜ್ಞೆ, ಪಾತ್ರಗಳ ಪ್ರಜ್ಞೆ ಮತ್ತು ಓದುಗರ ಪ್ರಜ್ಞೆಗಳು ಭಿನ್ನತೆಯನ್ನು ಕಳೆದು ಏಕತ್ರವಾಗಿ ಮಿಡಿಯುವುದನ್ನು ಕೃತಿಗಳಲ್ಲಿ ನೋಡಬಹುದು. ಮಹಾದೇವರು 'ಕುಸುಮಬಾಲೆ'ಯು ಅದುವರೆಗಿನ ವಾಸ್ತವ, ಸಾಂಕೇತಿಕ, ನವ್ಯ ಮುಂತಾದ ಪರಂಪರೆಯನ್ನು ನಿರಾಕರಿಸಿ ಕನ್ನಡದ ದೇಸಿ ಪರಂಪರೆಯೊಳಗೆ ಇದ್ದ ಅಪರೂಪದ ಕಥನ ಕ್ರಮವನ್ನು ರೂಪಿಸಿಕೊಂಡಿದೆ.

ಮಹಾದೇವರ ಕುಸುಮಬಾಲೆಯು ಕನ್ನಡದ ಕಥಾಪರಂಪರೆಯಲ್ಲಿ ಕಾದಂಬರಿಯ ನೆಲೆಗಳನ್ನು ಕಂಡು–ಕೊಳ್ಳುವ ಮೊಟ್ಟಮೊದಲ ಪ್ರಯತ್ನ. ಇದರಲ್ಲಿ ಸಹಜವಾಗಿಯೇ ಭಾರತೀಯ ಕಥನದ ಪರ್ಯಾಯ ಮಾರ್ಗಗಳು ಬಳಕೆಯಾದವು. ಇದರ ಕಾದಂಬರಿ ಲಿಖಿತವಾದ ಶಿಷ್ಟ ಪರಂಪರೆಯನ್ನು ಬಳಸುವ ಉಮೇದನ್ನು ತೋರಿಸಲಿಲ್ಲ. ಅದುವರೆಗೂ ಇಂಥ ಭಾವಗೀತೆ ಮಾದರಿಗೆ ಮನಸ್ಸು ಕೊಡಲಿಲ್ಲ. ಆ ದಿನಗಳಲ್ಲಿ ಪ್ರಚಲಿತವಾದ ದಲಿತ ಜೀವನ ಕೇಂದ್ರವಾದ ಜನಪದ ಕಥನ ಕಾವ್ಯಗಳು ಆಯ್ಕೆಯಾದವು. ಕುಸುಮಬಾಲೆಯು ಕವಿತೆ, ನಾಟಕ ಮತ್ತು ಗದ್ಯ ಕಥನಗಳೆಂಬ ಮೂರು ಬಗೆಗಳನ್ನು ಒಳಗೊಂಡಿದ್ದು, ಈ ಮಾರ್ಗವು ಅಪಾರವಾದ ಸಾಧ್ಯತೆಗಳನ್ನು ಹೊಂದಿತ್ತು. ಕೆಲವು ಲೇಖಕರು ಹೇಳುವಂತೆ ಮಹಾದೇವರು ವಡ್ಡಾರಾಧನೆ, ಬೃಹತ್ಕಥೆಯಂತಹ ಕೃತಿಗಳನ್ನು ಓದಿ ಅವುಗಳ ಕಥನ ಕ್ರಮದಿಂದ ಪ್ರಭಾವಿತರಾಗಿದ್ದರು. ಇಲ್ಲಿ ಮಹಾದೇವರು ಯಾವುದೇ ಅನುಕರಣೆಗೆ ಒಳಗಾಗುವುದಿಲ್ಲ. ಇದರ ಜೊತೆಗೆ ಮಹಾದೇವರು ಕೆಲವು ಆಫ್ರಿಕಾ, ಸ್ಪೇನ್ ಮತ್ತು ಲ್ಯಾಟಿನ್ ಅಮೇರಿಕಾದ ಕೆಲವು ಕೃತಿಗಳನ್ನು ಓದಿಕೊಂಡು ಅಪಾರವಾದ ಜ್ಞಾನ ಸಂಪತ್ತನ್ನು ಪಡೆದುಕೊಂಡಿದ್ದರು.

ಮಹಾದೇವರು ಕುಸುಮಬಾಲೆಯನ್ನು ವಸಾಹತುಶಾಹಿಯ ಕಪಿಮುಷ್ಠಿಯಿಂದ ಬಿಡಿಸಿಕೊಂಡು ತನ್ನದೇ ಆದ ಹೊಸಹಾದಿಯನ್ನು ಕಂಡುಕೊಳ್ಳುವ ಜಾಗತಿಕ ಪ್ರಯತ್ನವನ್ನು ಮಾಡಿದ್ದಾರೆ. ಮಹಾದೇವರವರು ಹಳೆಯ ಹಾದಿಗಳನ್ನು ಬಳಸದೆಯೇ ಅನೇಕ ಅವಿಷ್ಕಾರಗಳನ್ನು ತಂದುಕೊಂಡಿದ್ದರಿಂದ ಅವರ ಕಾದಂಬರಿಯು ಅನನ್ಯವಾಯಿತು. ಮಹಾದೇವರ ಕಥನ ಕಾದಂಬರಿಗಳೇ ಕಥೆಗೆ ಹಾಗೂ ಪಾತ್ರಗಳಿಗೆ ಮತ್ತು

ಕಥೆಯಲ್ಲಿ ಬರುವಂತಹ ದಲಿತರ ಜೀವನ ಚಿತ್ರಣವನ್ನು ಕಾದಂಬರಿಯ ಚೌಕಟ್ಟಿನಲ್ಲಿ ನೋಡಬಹುದು. ಮಹಾದೇವರ ಕಾದಂಬರಿಯ ಬಗ್ಗೆ ಹೆಚ್ಚು ಚರ್ಚೆಗಳು ನಡೆದಿವೆ. ಇದರಲ್ಲಿ ಯು.ಆರ್. ಅನಂತಮೂರ್ತಿ ಹಾಗೂ ಕೆ.ವಿ. ನಾರಾಯಣರು ಎರಡು ದ್ರುವಗಳಂತೆ ಒಡಲಾಳ ಹಾಗೂ ಕುಸುಮಬಾಲೆ ಬಗ್ಗೆ ಚರ್ಚಿಸಿರುವುದು ಕಾಣುತ್ತದೆ. ದೇವನೂರರ ಪಾತ್ರಗಳನ್ನು ಶಿವರಾಮ ಕಾರಂತರ ಚೋಮ ಮತ್ತು ಕುವೆಂಪು ಅವರ ನಾಯಿ ಗುತ್ತಿಯ ಸಂಗಡ ಹೋಲಿಸಿದ ಅನಂತಮೂರ್ತಿಯವರು ಪಾಶ್ಚಾತ್ಯ ಸಾಹಿತ್ಯ ವಿಮರ್ಶೆಯ ಪರಿಭಾಷೆಯು ಬರುವ ಲೋ–ಮೈಮೆಟಿಕ್ ಎಂಬ ಮಾತಿನಿಂದ ಆ ಪಾತ್ರಗಳನ್ನು ವಿವರಿಸಿದರು. ಒಂದು ಕಡೆ ಅಸಾಹಕತೆಯನ್ನು ತೋರ್ಪಡಿಸುವಾಗ ಚೋಮನ ಅಸಾಹಕತೆಯ ದುರಂತ ನಾಯಿ ಗುತ್ತಿಯ ಜಾಣತನ ಅದೇ ಹಾದಿಯಲ್ಲಿ ದೇವನೂರರ ಸಾಕಮ್ಮ, ಶಿವು, ಗಾರೆಸಿದ್ದಮಾವ ಮತ್ತು ಅಮಾಸ ಮುಂತಾದವರು. ಈ ಬಗೆಯವರು ಎಂದು ಅವರ ಅನಿಸಿಕೆ, ಇಲ್ಲಿ ಪಾತ್ರಗಳ ಸಾಮರ್ಥ್ಯವನ್ನು ಸಾಮಾಜಿಕ ಪರಿಸರವಾಗಲೀ ಇತಿಹಾಸವಾಗಲೀ ಗ್ರಹಿಸುವಲ್ಲಿ ಸೋತಿದೆ, ಎಂಬುದು ಈ ಕಥನದಲ್ಲಿ ಕಂಡುಕೊಳ್ಳುವ ಸಾಧ್ಯತೆ ಇದೆ.

ಕಾದಂಬರಿಯಲ್ಲಿ ಹಾಸ್ಯ ಅಣಕ ಮತ್ತು ಗೇಲಿಗಳು ಶೋಷಕ ಸಮಾಜದ ಸಂಗಡ ಏಣಿಯುವ ಕಾರ್ಯದಲ್ಲಿ ತಮ್ಮ ತಮ್ಮಲ್ಲಿ ಮಾತನಾಡುವಾಗ ಮುನ್ನಲೆಗೆ ಬರುತ್ತದೆ. ಇಲ್ಲಿ ಧೈರ್ಯತೆ ಎಂಬುದನ್ನು ನಾವು ಗಾರೆಸಿದ್ದಮಾವನಂಥವರಲ್ಲಿ ಬದಲಾಗುತ್ತಿರುವ ಸಾಕ್ಷಿಗಳನ್ನು ನೋಡಬಹುದು. ಇಲ್ಲಿ ವಿಶೇಷಣಗಳ ಬದಲಾಗಿ ಓದುಗರ ಮೇಲೆ ಪ್ರಭಾವ ಬೀರುವಂತಹ ಹತ್ತು ಹಲವು ಉಪಕರಣಗಳನ್ನು ಅವರು ಕಂಡುಕೊಂಡಿದ್ದಾರೆ, ಪಾತ್ರಗಳ ಕುರಿತು ಮಾತನಾಡುವಾಗ ಪಾತ್ರದಾರಿಯ ವರ್ತನೆಯ ಜೊತೆಯಲ್ಲಿ ನಿರೂಪಕನು ಅಂತರಂಗ ಮತ್ತು ಬಹಿರಂಗಗಳೆರಡರ ಬಗ್ಗೆಯು ಕೂಡ ವ್ಯಾಖ್ಯಾನಗಳನ್ನು ನೀಡುತ್ತಾನೆ.

ನಾವು ಕಾದಂಬರಿಯಲ್ಲಿ ಬರುವಂತಹ ಕಥಾ ಪ್ರಸಂಗಗಳನ್ನು ಕುರಿತು ಮಾತನಾಡುವುದಾದರೆ ಮಹಾದೇವರವರು ಘಟನೆಗಳಿಗಿಂತ ವರ್ಣನೆಗಳಿಗೆ ಹೆಚ್ಚು ಅವಕಾಶ ಕೊಡುವುದು ಸೂಕ್ತ ಎಂದು ಭಾವಿಸುತ್ತಾರೆ. ಯಾವುದೇ ಒಂದು ಕಥೆಯನ್ನು ಜಗತ್ತಿಗೆ ಪರಿಚಯಿಸಬೇಕಾದರೆ ಇತಿಮಿತಿಗಳ ಪರಿಚಯ ಮಾಡಲು ಭೌತಿಕವಾದ ವಿವರಗಳನ್ನು ಕಾವ್ಯಾತ್ಮಕವಾದ ವಿವರಣೆಯಿಂದ ಪಡೆಯಬೇಕಾಗುತ್ತದೆ. ಒಬ್ಬ ಲೇಖಕ ಜಡವಸ್ತುಗಳಿಗೂ ಜೀವ ಕೊಡಬೇಕಾದ ಅನಿವಾರ್ಯತೆ ಬರುತ್ತದೆ. ಕುಸುಮಬಾಲೆ ಕಾದಂಬರಿಯು ಹೇಳುತ್ತಿರುವುದು ಇಡೀ ಸಮುದಾಯದ ಇತಿಹಾಸ. ವರ್ತಮಾನ ಮತ್ತು ಮುನ್ನೋಟಗಳನ್ನು ಸಮುದಾಯದ ಚಲನಶೀಲತೆಯನ್ನು ಒಂದೆರಡು ಪಾತ್ರಗಳಿಂದ ತಿಳಿಯಲು ಆಗುವುದಿಲ್ಲ, ಒಂದು ಎರಡು ಪಾತ್ರಗಳು ಸೇರಿ ಗೆದ್ದಲು ಹುಳು ಕಟ್ಟುವ ಹಾಗೆ ಕಟ್ಟಿದರೆ ಒಂದು ಕಥೆಯಾಗಿ ಮಾರ್ಪಾಟ್ಟಾಗುತ್ತದೆ. ಕಾದಂಬರಿಯ ಲೋಕದಲ್ಲಿ ಬರುವ ಯಾಡ–ಅಮಾಸ ಮದ್ವಾಚಾರ್ಯ ಮುಂತಾದವರು ಬಲಿಪಶುಗಳೊ ಅಪರಾಧಿಗಳೋ ಹೇಳಲಾಗದು. ಕುರಿಯಯ್ಯನ ನನ್ನಿಯು ಕಾದಂಬರಿಯ ಕೇಂದ್ರಬಿಂದು, ಇಲ್ಲಿ ಪುರಾಣವಾಗಲಿ ವರ್ತಮಾನವಾಗಲಿ ಅಲ್ಲಿ ನಡೆಯು ಸಂಗತಿಗಳು ದಲಿತರ ಹೋರಾಟಕ್ಕೆ ಮುಂದಾದರೂ ನನ್ನಿಯು ಇಪ್ಪತ್ತೊಂದನೆಯ ಶತಮಾನಕ್ಕೆ ಒಳಗೊಳ್ಳುತ್ತದೆ. ಇಲ್ಲಿ ಅವನ ಮಾತುಗಳು ಅವನದಾಗಿರುವುದಿಲ್ಲ ಅವು ತೊರಾರ ಹಟ್ಟಿಯ ಜೋತಮ್ಮ ಅವನಿಂದ ಆಡಿಸಿದ ಮಾತುಗಳು.

'ಒಡಲಾಳ' ದಲ್ಲಿ ರೇಖಾಚಿತ್ರಗಳಾಗಿದ್ದ ಪಾತ್ರಗಳು ಕುಸುಮಬಾಲೆಯಲ್ಲಿ ವರ್ಣಚಿತ್ರಗಳಾಗುತ್ತವೆ. ಮೊದಲಿಗೆ ಇಲ್ಲದಿರುವ ಧ್ವನಿಶಕ್ತಿಯು ನಂತರದ ಕುಸುಮಬಾಲೆಯಲ್ಲಿ ಒದಗಿಬಂದಿದೆ. ಇಲ್ಲಿ ಜಾನಪದ

ಅವ್ಯಕ್ತಿ, ಜನಪದರ ಹಾಡು–ಪಾಡು ಮತ್ತು ಆಧುನಿಕ ಸಮಾಜ ಬಿಕ್ಕಟ್ಟುಗಳು ಇಂತಹದೊಂದು ವಾತಾವರಣದಲ್ಲಿ ಹೆಣೆದಿರುವ ಲೇಖಕ ಕನ್ನಡದಲ್ಲಿ ಮತ್ತೊಬ್ಬರಿಲ್ಲ. ದೇವನೂರ ಮಹಾದೇವರವರ ಕಾದಂಬರಿಯಲ್ಲಿ ಬಳಸಿರುವ ಭಾಷೆಯು ಸಾಕಷ್ಟು ವಾಗ್ವಾದಕ್ಕೆ ಕಾರಣವಾಗಿದೆ. ಇಲ್ಲಿ ಬಳಸಿರುವ ಭಾಷೆ ಅರ್ಥವಾಗುವುದಿಲ್ಲ, ಇದು ಒಳಗೆ ಇಳಿಯುವುದಿಲ್ಲ ಎಂಬುದು ಚಂದ್ರಶೇಖರ ಪಾಟೀಲ, ಲಂಕೇಶ್ ಮುಂತಾದವರ ಮನದಾಳದ ಮಾತು. ಇನ್ನೊಂದು ಕಡೆ ಕಾದಂಬರಿಯ ಒಳ ಭಾಷೆಯನ್ನು ಒಕ್ಕೊರಳಿನಿಂದ ಹೊಗಳಿದ್ದಾರೆ. ಚದುರಂಗರವರು ಕುಸುಮಬಾಲೆಯಲ್ಲಿ ಬಳಸಿರುವ ಭಾಷೆಯು "ಹೊಯ್ಸಳ ಶಿಲ್ಪಗಳು ಕಲ್ಲನ್ನು ಮೇಣ ಎನ್ನುವ ಹಾಗೆ".[4] ಉಪಯೋಗಿಸಿದ್ದಾರೆ ಎಂದು ಹೊಗಳಿದ್ದಾರೆ. ಕುಸುಮಬಾಲೆ ಕಾದಂಬರಿಗೆ ಬಂದ ಅಕ್ಷೇಪಣೆಗಳು ಒಡಲಾಳಕ್ಕೆ ಬಂದಿಲ್ಲ. ಸಂಭಾಷಣೆ, ವರ್ಣನೆ, ನಿರೂಪಣೆ, ಆಲೋಚನೆ ಮುಂತಾದ ಹಲವು ಕೆಲಸಗಳಿಗೆ ಆಡುಮಾತನ್ನು ಬಳಸುವ ಪ್ರಯೋಗ ಕನ್ನಡದಲ್ಲಿ ಕಡಿಮೆ, ನಿರ್ದಿಷ್ಟ ಪ್ರದೇಶದ ಸಾಮಾಜಿಕ ಉಪಭಾಷೆಯು 'ಕುಸುಮಬಾಲೆ'ಯಲ್ಲಿ ಬಳಸಿರುವ ಭಾಷೆಯ ತಳಹದಿಯಾದರೂ ಒಂದು ಇನ್ನೊಂದರ ನಕಲು ಅಲ್ಲ, ಜನರಾಡುವ ಭಾಷೆಯು ಕಾದಂಬರಿಯಲ್ಲಿ ಬಂದಾಗ ಕೆಲವು ಕಟ್ಟುಪಾಡುಗಳಿಗೆ ಒಳಗಾಗುತ್ತದೆ. ಆಡುಮಾತು ನಡಿಗೆಯಾದರೆ ಸಾಹಿತ್ಯ ಭಾಷೆ ನರ್ತನ, ಕಾದಂಬರಿಯಲ್ಲಿ ನರ್ತನ–ನಡಿಗೆ ಎರಡರ ಸಂಯೋಜನೆ ಇರುತ್ತದೆ.

ನಿಜವಾಗಿಯು 'ಕುಸುಮಬಾಲೆ'ಯು ಸಾವಧಾನದ ಓದನ್ನು ಬಯಸುವುದು ಅದರ ಭಾಷೆಯಿಂದ ಮಾತ್ರ. ಆದರೆ ಒಟ್ಟು ರಚನಾಕ್ರಮದಿಂದ ಓದಿದರೆ ಮಾತ್ರ ನಮಗೆ ನಿಜವಾದ ಸಾಹಿತ್ಯ ಅನುಭವ ಕೊಡುವುದೇ ವಿನಃ ಅರ್ಥದ ಉಂಡೆಗಳನ್ನು ಅಲ್ಲ. ಕಾದಂಬರಿಯಲ್ಲಿ ಮೌಖಿಕ ರಚನೆಯ ಮಾದರಿಯನ್ನು ದೇಸಿಯ ಕಥನಗಳನ್ನು ಬಳಸಿರುವುದನ್ನು ಕಾಣಬಹುದು. ದೇಸಿಯತೆಯಲ್ಲಿ ಮೌಖಿಕ ರಚನೆಯನ್ನು ಕಂಡು ಕೊಳ್ಳುವುದು ಕಾದಂಬರಿಗಳಲ್ಲಿ ಎಂಬುದು ಸತ್ಯವಾದ ವಿಚಾರ. ಆ ಕಾದಂಬರಿಯಲ್ಲಿ ಬಳಸಿದ ಪ್ರಾದೇಶಿಕತೆ ಹಾಗೂ ದೇಶಿಯತೆಯ ನೆಲೆಗಟ್ಟಿನಲ್ಲಿನ ಭಾಷೆಯು ಕೂಡ ವಿಶೇಷ ಎಂಬುದಕ್ಕೆ ಕಾರಣವಾಗಿದೆ. ಮಹಾದೇವರ ಕಾದಂಬರಿಗಳಲ್ಲಿ ಹೊಸ ಹಾದಿಯನ್ನು ಕಂಡುಕೊಳ್ಳುವ ಜಾಗತಿಕ ಪ್ರಯತ್ನವನ್ನು ಮಾಡುವುದರ ಮೂಲಕ ಹಳೆಯ ಹಾದಿಯನ್ನು ಬಳಸದೆಯೇ ಅನೇಕ ಅವಿಷ್ಕಾರಗಳಿಗೆ ಸಾಕ್ಷಿಭೂತವಾಗಿದೆ.

ಕೊನೆಟಿಪ್ಪಣಿಗಳು

1. ರಾವೇಂದ್ರ ರಾವ್ ಎಚ್.ಎಸ್. (2020). *ನೀರಿಗೆ ಮೂಡಿದ ಆಕಾರ.* ಪುಟ. 248
2. *ಅದೇ.* ಪುಟ. 240
3. *ಅದೇ.* ಪುಟ. 251
4. *ಅದೇ.* ಪುಟ. 258

ಪರಾಮರ್ಶನ ಗ್ರಂಥಗಳು

- ದೇವನೂರ ಮಹಾದೇವ. (2015). ಒಡಲಾಳ. ಪುಸ್ತಕ ಪ್ರಕಾಶನ.
- ದೇವನೂರ ಮಹಾದೇವ. (2018). *ಕುಸುಮ ಬಾಲೆ.* ಅಭಿನವ ಪ್ರಕಾಶನ.
- ರಾವೇಂದ್ರ ರಾವ್ ಎಚ್.ಎಸ್. (2020). *ನೀರಿಗೆ ಮೂಡಿದ ಆಕಾರ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.